**All India Radio: Bangalore**
**05.05.2025 / 13.10 hrs**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**05.05.2025 / 13.10 hrs**

**<><*<><>*><>**

**ಮುಖ್ಯಾಂಶಗಳು**

**೧. ಅಭಿವೃದ್ಧಿ ಮತ್ತು ಪರಿಸರ ನಡುವೆ ಸಮತೋಲನ ಅಗತ್ಯ - ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್**

**೨. ಸುಪ್ರೀಂಕೋರ್ಟ್‌ನಲ್ಲಿಂದು ವಕ್ಫ್ ತಿದ್ದುಪಡಿ ಕಾಯ್ದೆ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ**

**೩. ನವದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಜಪಾನ್ ಸಹವರ್ತಿ ಜನರಲ್ ನಾಕತಾನಿ ನಡುವೆ ದ್ವಿಪಕ್ಷೀಯ ಮಾತುಕತೆ**

**೪. ಐಪಿಎಲ್ ಟಿ-೨೦ ಕ್ರಿಕೆಟ್ ; ಇಂದು ಸನ್‌ರೈಸರ್ಸ್ ಹೈದರಾಬಾದ್-ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿ**

**<><*<><>*><>**

ಕರ್ನಾಟಕ ಪ್ರವಾಸ ಕೈಗೊಂಡಿರುವ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಇಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿರುವ ಅರಣ್ಯ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದರು. ಮಹಾವಿದ್ಯಾಲಯದ ಆವರಣದಲ್ಲಿ ಉಪರಾಷ್ಟ್ರಪತಿ ಹಾಗೂ ಅವರ ಪತ್ನಿ ತಮ್ಮ ತಾಯಿಯವರ ಸ್ಮರಣಾರ್ಥ 'ಏಕ್ ಪೇಡ್ ಮಾ ಕೆ ನಾಮ್, ಉಪಕ್ರಮದ ಭಾಗವಾಗಿ ಸಸಿಗಳನ್ನು ನೆಟ್ಟರು. ಬಳಿಕ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಅಭಿವೃದ್ಧಿ ಮತ್ತು ಪರಿಸರದ ನಡುವೆ ಸಮತೋಲನ ಅಗತ್ಯ. ಸುಸ್ಥಿರ ಅಭಿವೃದ್ಧಿಯೇ ಮೂಲಮಂತ್ರವಾಗಿರಬೇಕು ಎಂದರು. ಪಶ್ಚಿಮಘಟ್ಟ ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ಜೀವವೈವಿಧ್ಯ ಹೊಂದಿರುವ ತಾಣ ಎಂದು ಅವರು ಪ್ರಕೃತಿ ಕೇವಲ ಮಾನವರಿಗೆ ಮಾತ್ರ ಸೀಮಿತವಲ್ಲ, ಪ್ರಾಣಿಪಕ್ಷಿಗಳಿಗೂ ಮೀಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಸಚಿವ ಮಂಕಾಳ ವೈದ್ಯ, ಸಂಸದ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ ಮತ್ತಿತರರು ಉಪಸ್ಥಿತರಿದ್ದರು. ಇಂದು ಬೆಳಿಗ್ಗೆ ಹುಬ್ಬಳ್ಳಿ

ಆಗಮಿಸಿದ ಅವರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮತ್ತಿತರ ಗಣ್ಯರು ಬರಮಾಡಿಕೊಂಡರು.

**<><*<><>*><>**

ವಕ್ಫ್ ತಿದ್ದುಪಡಿ ಕಾಯ್ದೆ- ೨೦೨೫ ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಇಂದು ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿ ಸಂಜಯ್ ಕುಮಾರ್ ಮತ್ತು ನ್ಯಾಯಮೂರ್ತಿ ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠ, ಮಧ್ಯಾಹ್ನ ೨ ಗಂಟೆಗೆ ಇದರ ಕುರಿತು ವಿಚಾರಣೆ ನಡೆಸಲಿದೆ. ಕಳೆದ ತಿಂಗಳು ೧೭ ರಂದು ನಡೆದ ವಿಚಾರಣೆಯಲ್ಲಿ, ಪ್ರಾಥಮಿಕ ವಿಚಾರಣೆಗಾಗಿ ಮತ್ತು ಅಗತ್ಯವಿದ್ದರೆ, ಮಧ್ಯಂತರ ಆದೇಶಗಳನ್ನು ಹೊರಡಿಸಲಾಗುವುದು ಎಂದು ಪೀಠ ಸ್ಪಷ್ಟಪಡಿಸಿತ್ತು. ಕಳೆದ ವಿಚಾರಣೆಯಲ್ಲಿ, ನ್ಯಾಯಾಲಯ, ಕೆಲವು ಕಳವಳಗಳನ್ನು ವ್ಯಕ್ತಪಡಿಸಿದ ನಂತರ, ಕೇಂದ್ರ ಸರ್ಕಾರ ತಿದ್ದುಪಡಿ ಕಾಯ್ದೆಯ ಕೆಲವು ವಿವಾದಾತ್ಮಕ ನಿಬಂಧನೆಗಳನ್ನು ತಡೆಹಿಡಿಯಲು ಕ್ರಮ ಕೈಗೊಂಡಿತು. ವಕ್ಫ್‌ಗಳಿಂದ, ಬಳಕೆದಾರರ ಭೂಮಿ ಸೇರಿದಂತೆ, ನೋಂದಾಯಿತ ಅಥವಾ ಅಧಿಸೂಚಿತ ವಕ್ಫ್‌ಗಳಿಗೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಕೇಂದ್ರ ಭರವಸೆ ನೀಡಿತ್ತು. ಕೇಂದ್ರ ವಕ್ಫ್ ಕೌನ್ಸಿಲ್ ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ನೇಮಕಾತಿಗಳನ್ನು ಮಾಡದಿರಲು ಸಹ ಅದು ತೀರ್ಮಾನ ಕೈಗೊಂಡಿತ್ತು. ನಂತರ, ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ, ಈ ಕಾಯ್ದೆಯನ್ನು ಸಮರ್ಥಿಸಿಕೊಂಡು, ಅರ್ಜಿದಾರರ ವಾದಗಳನ್ನು ನಿರಾಕರಿಸುವ ಪ್ರಾಥಮಿಕ ಅಫಿಡವಿಟ್ ಅನ್ನು ಸಲ್ಲಿಸಿತ್ತು. ಅರ್ಜಿದಾರರು, ಕೇಂದ್ರದ ಅಫಿಡವಿಟ್‌ಗೆ ಮರುಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿದ್ದಾರೆ.

**<><*<><>*><>**

ನವದೆಹಲಿಯಲ್ಲಿಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜಪಾನ್ ರಕ್ಷಣಾ ಸಚಿವ ಜನರಲ್ ನಾಕತಾನಿ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು.  ಈ ಸಭೆಯಲ್ಲಿ ಉಭಯ ನಾಯಕರು ಪ್ರಸ್ತುತ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಭದ್ರತಾ ಪರಿಸ್ಥಿತಿಯ ಕುರಿತು ಅಭಿಪ್ರಾಯಗಳು ಮತ್ತು ವಿಚಾರ ವಿನಿಮಯ ಮಾಡಿಕೊಂಡರು. ಇದೇ ವೇಳೆ ಅವರು, ದ್ವಿಪಕ್ಷೀಯ ರಕ್ಷಣಾ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಲಾಗಿದೆ. ತಮ್ಮ ಭಾಷಣದಲ್ಲಿ ರಕ್ಷಣಾ ಸಚಿವರು, ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತದೊಂದಿಗೆ ಒಗ್ಗಟ್ಟನ್ನು ವ್ಯಕ್ತಪಡಿಸಿದ್ದಕ್ಕಾಗಿ ಜಪಾನ್ ಸರ್ಕಾರಕ್ಕೆ ಧನ್ಯವಾದ ಅರ್ಪಿಸಿದರು. ಭಾರತ-ಜಪಾನ್ ರಕ್ಷಣಾ

ಸಂಬಂಧಗಳನ್ನು ಬಲಪಡಿಸಲು ಜನರಲ್ ನಾಕತಾನಿ ನೀಡಿದ ಕೊಡುಗೆಗಾಗಿ ಅವರನ್ನು ರಾಜನಾಥ್ ಸಿಂಗ್ ಶ್ಲಾಘಿಸಿದರು. ಸಭೆಗೆ ಮುನ್ನ ಜನರಲ್ ನಾಕತಾನಿ ಅವರಿಗೆ ಸೇನಾ ಗೌರವ ನೀಡಲಾಯಿತು.  ಭಾರತ ಮತ್ತು ಜಪಾನ್ ದೀರ್ಘಾವಧಿಯ ಸ್ನೇಹ-ಸಂಬಂಧವನ್ನು ಹಂಚಿಕೊಂಡಿವೆ. ರಕ್ಷಣೆ ಮತ್ತು ಭದ್ರತೆ ಎರಡೂ ರಾಷ್ಟ್ರಗಳ ನಡುವಿನ ಸಂಬಂಧಗಳ ಪ್ರಮುಖ ಸ್ತಂಭಗಳಾಗಿವೆ. ಕಳೆದ ವರ್ಷ ನವೆಂಬರ್‌ನಲ್ಲಿ ಆಸಿಯಾನ್ ರಕ್ಷಣಾ ಸಚಿವರ ಸಭೆ-ಪ್ಲಸ್‌ನ ಸಂದರ್ಭದಲ್ಲಿ ಅವರ ಮೊದಲ ಸಂವಾದದ ನಂತರ, ಆರು ತಿಂಗಳೊಳಗೆ ಇಬ್ಬರು ರಕ್ಷಣಾ ಸಚಿವರ ನಡುವಿನ ಎರಡನೇ ಸಭೆ ಇದಾಗಿದೆ.

<><*<><>*><>

ಇತ್ತೀಚಿನ ಸೂಚ್ಯಂಕಗಳ ಪ್ರಕಾರ ಭಾರತದ ಆರ್ಥಿಕತೆ ಉತ್ತಮ ಪ್ರಗತಿಯತ್ತ ದಾಪುಗಾಲು ಹಾಕುತ್ತಿದೆ ಎಂದು ಪ್ರಧಾನ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ. ಹರಿಯಾಣದ ಅಶೋಕ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಸವಾಲಿನ ಜಾಗತಿಕ ಪರಿಸರದ ಹೊರತಾಗಿ ಭಾರತದ ಆರ್ಥಿಕತೆ ಉತ್ತಮ ಸ್ಥಿತಿಯಲ್ಲಿದೆ. ೨೦೨೫ರ ಆರ್ಥಿಕ ವರ್ಷದ ಪ್ರಗತಿ ಮೇ ಅಂತ್ಯದ ವೇಳೆಗೆ ಸ್ಪಷ್ಟವಾಗಲಿದ್ದು, ಪ್ರಸ್ತುತ ಸೂಚಕಗಳು ಉತ್ತಮ ಪ್ರಗತಿಯನ್ನು ಸೂಚಿಸುತ್ತಿವೆ ಎಂದರು. ಕೈಗೆಟಕುವ ಇಂಧನ, ಉತ್ಪಾದನೆ ಕೇಂದ್ರದ ಅಭಿವೃದ್ಧಿ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಏರಿಕೆ ದೇಶದ ಆದ್ಯತೆಯ ಕ್ಷೇತ್ರವಾಗಿವೆ. ಇದರ ಜೊತೆಗೆ ಕೃತಕ ಬುದ್ಧಿಮತ್ತೆ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಬೆಳವಣಿಗೆಗೆ ಪೂರಕವಾಗಿವೆ ಎಂದರು.

<><*<><>*><>

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತೆಲಂಗಾಣದಲ್ಲಿಂದು ಸುಮಾರು ೬ ಸಾವಿರ ಕೋಟಿ ರೂಪಾಯಿ ಮೊತ್ತದ ೨೮೫ ಕಿಲೋಮೀಟರ್ ರಾಷ್ಟ್ರೀಯ ಹೆದ್ದಾರಿ ಯೋಜನೆಯನ್ನು ಉದ್ಘಾಟಿಸಲಿದ್ದಾರೆ. ನಂತರ ಅವರು, ಕೋಮರಂಭೀಮ್ ಆಸೀಫಾಬಾದ್ ಜಿಲ್ಲೆಯ ಕಾಗಜ್ ನಗರಕ್ಕೆ ತೆರಳಿ ಚತುಷ್ಪಥ ಎಕ್ಸಪ್ರೆಸ್ ರಾಷ್ಟ್ರೀಯ ಹೆದ್ದಾರಿ ೩೬೩ ರನ್ನು ಉದ್ಘಾಟಿಸಲಿದ್ದಾರೆ. ಇಂದು ಸಂಜೆ ಅವರು ಸಂಶಾಬಾದ್ ಬಳಿ ಷಷ್ಪಥ ಹೈದರಾಬಾದ್-ಬೆಂಗಳೂರು ಹೆದ್ದಾರಿಯ ಭಾಗಶಃ ಕಾಮಗಾರಿಗೆ ಚಾಲನೆ ನೀಡಲಿದ್ದು, ಹೈದರಾಬಾದ್‌ನ ಬಿಎಚ್‌ಇಎಲ್ ಮತ್ತು ಅಂಬರ್‌ಪೇಟ್ ಬಳಿ ನಿರ್ಮಿಸಲಾದ ಮೇಲ್ಸೇತುವೆಗಳನ್ನು ಸಹ ಸಚಿವರು ಉದ್ಘಾಟಿಸಲಿದ್ದಾರೆ.

<><*<><>*><>

'ಬಿಜೆಪಿ ತಿಳಿಯಿರಿ' ಉಪಕ್ರಮದಡಿ ಕೇಂದ್ರ ಸಚಿವ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ನವದೆಹಲಿಯಲ್ಲಿ ನಿನ್ನೆ ಅಂಗೋಲಾ ಅಧ್ಯಕ್ಷ ಜೊವೊ ಲೊರೆಂಕೊ ಅವರನ್ನು ಭೇಟಿಯಾದರು. ಇದೇ ವೇಳೆ ಅವರು, ಆಫ್ರಿಕಾ ಒಕ್ಕೂಟದ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದ್ದಕ್ಕಾಗಿ ಅಂಗೋಲಾ ಅಧ್ಯಕ್ಷರನ್ನು ಅಭಿನಂದಿಸಿದರು. ಸಚಿವ ಜೆ.ಪಿ. ನಡ್ಡಾ, ಅಂಗೋಲಾ ಅಧ್ಯಕ್ಷರೊಂದಿಗೆ ಬಿಜೆಪಿಯ ಸಂಘಟನಾ ಚೌಕಟ್ಟು ಹಾಗೂ ಪ್ರಸ್ತುತ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ಹಂಚಿಕೊಂಡರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕೈಗೊಂಡಿರುವ ಪ್ರಮುಖ ಆರೋಗ್ಯ ರಕ್ಷಣಾ ಉಪಕ್ರಮಗಳ ಮೇಲೂ ಚರ್ಚೆ ಕೇಂದ್ರೀಕರಿಸಿತ್ತು.

<><*<><>*><>

ಅಮೆರಿಕ ಹೊರಗೆ ನಿರ್ಮಾಣವಾಗುವ ಎಲ್ಲ ಚಲನಚಿತ್ರಗಳ ಮೇಲೆ ೧೦೦ ಪ್ರತಿಶತ ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಈ ಕಾರ್ಯ ವಿಧಾನವನ್ನು ಆರಂಭಿಸಲು ವಾಣಿಜ್ಯ ಇಲಾಖೆ ಮತ್ತು ಅಮೆರಿಕ ವ್ಯಾಪಾರ ಪ್ರತಿನಿಧಿಗೆ ಸೂಚನೆ ನೀಡಿದ್ದಾರೆ. ಅಮೆರಿಕದ ಚಲನಚಿತ್ರ ನಿರ್ಮಾಪಕರು ಮತ್ತು ಸ್ಟುಡಿಯೋಗಳನ್ನು ಇತರ ರಾಷ್ಟ್ರಗಳು ಅಮೆರಿಕದಿಂದ ದೂರ ಸೆಳೆಯಲು ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿರುವುದರಿಂದ ಅಮೆರಿಕದ ಚಲನಚಿತ್ರೋದ್ಯಮ ಅತ್ಯಂತ ವೇಗವಾಗಿ ಕುಸಿಯುತ್ತಿದೆ ಎಂದು ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><*<><>*><>

ಭಾರತದ ನವೋದ್ಯಮ ಪರಿಸರ ಸುಸ್ಥಿರ ಬೆಳವಣಿಗೆ ಪ್ರದರ್ಶಿಸಿದ್ದು, ವರದಿಯೊಂದರ ಪ್ರಕಾರ ನವೋದ್ಯಮಗಳಲ್ಲಿ ನೇಮಕಾತಿ ಶೇಕಡ ೩೦ರಷ್ಟು ಏರಿಕೆ ದಾಖಲಿಸಿದೆ. ವರ್ಷದಿಂದ ವರ್ಷಕ್ಕೆ ಶೇಕಡ ೩೨ರಷ್ಟು ಏರಿಕೆ ದಾಖಲಾಗುತ್ತಿರುವುದು ಸುಸ್ಥಿರ ಮತ್ತು ನಾವೀನ್ಯತೆ ನೇತೃತ್ವದ ಬೆಳವಣಿಗೆಯೆಡೆಗೆ ಕಾರ್ಯತಂತ್ರದ ಪ್ರಗತಿಯನ್ನು ಸೂಚಿಸುತ್ತದೆ. ಕಳೆದ ೩ ತಿಂಗಳಲ್ಲಿ ನೇಮಕಾತಿ ಪ್ರಮಾಣ ಶೇಕಡ ೧೨ರಷ್ಟು ಏರಿಕೆ ಕಂಡಿದೆ. ಕಳೆದ ವರ್ಷ ನೂತನ ನವೋದ್ಯಮಗಳ ನೋಂದಣಿಯಲ್ಲೂ ಶೇಕಡ ೨೨ರಷ್ಟು ಏರಿಕೆ ದಾಖಲಾಗಿದೆ.

<><*<><>*><>

ತೆಲಂಗಾಣದಲ್ಲಿ ಈ ತಿಂಗಳು ನಡೆಯಲಿರುವ ವಿಶ್ವಸುಂದರಿ ಸ್ಪರ್ಧೆಗೆ ಜಗತ್ತಿನಾದ್ಯಂತದ ಸ್ಪರ್ಧಿಗಳು ಹೈದರಾಬಾದ್‌ಗೆ ಆಗಮಿಸುತ್ತಿದ್ದಾರೆ. ಹೈದರಾಬಾದ್‌ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿನ್ನೆ, ಕೆನಡಾದ ಎಮ್ಮಾ ಡೀನಾ ಕ್ಯಾಥರಿನ್ ಮಾರಿಸನ್ ಮತ್ತು ಬ್ರೆಜಿಲ್‌ನ ಜೆಸ್ಸಿಕಾ

ಸ್ಕ್ಯಾಂಡಿಯುರಿಖ್ ಪೆಡ್ರೊಸೊ ಅವರನ್ನು ಅಧಿಕಾರಿಗಳು ಸ್ವಾಗತಿಸಿದರು. ಇದಕ್ಕೂ ಮುನ್ನ, ಮಿಸ್ ವರ್ಲ್ಡ್ ಅಧಿಕಾರಿ ಜೋನಾಥನ್ ಮಾರ್ಕ್ ಶಾ ಆಗಮಿಸಿದರು. ೧೨೦ ದೇಶಗಳ ಸ್ಪರ್ಧಿಗಳು, ಮುಂದಿನ ಎರಡು ದಿನಗಳಲ್ಲಿ ಹೈದರಾಬಾದ್ ತಲುಪಲಿದ್ದಾರೆ. ೭೨ ನೇ ಮಿಸ್‌ವರ್ಲ್ಡ್ ಸ್ಪರ್ಧೆ, ಈ ತಿಂಗಳ ೧೦ ರಿಂದ ೩೧ ರವರೆಗೆ ತೆಲಂಗಾಣದಲ್ಲಿ ನಡೆಯಲಿದೆ. ಈ ವೇಳೆ, ರಾಜ್ಯವನ್ನು ಜಾಗತಿಕವಾಗಿ ಹೆಸರುವಾಸಿ ಮಾಡಲು ಮತ್ತು ಹೂಡಿಕೆಗಳನ್ನು ಆಕರ್ಷಿಸಲು ತೆಲಂಗಾಣ ಸರ್ಕಾರ ಕ್ರಿಯಾ ಯೋಜನೆ ರೂಪಿಸಿದೆ. ಮಿಸ್‌ವರ್ಲ್ಡ್ ಸ್ಪರ್ಧೆಯಲ್ಲಿ ಭಾಗವಹಿಸುವವರು ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಿಗೆ ಭೇಟಿ ನೀಡಲಿದ್ದಾರೆ. ಅವರ ಪ್ರವಾಸದಲ್ಲಿ ಹೈದರಾಬಾದ್‌ನಲ್ಲಿರುವ ನಿಜಾಮ್ ಕಾಲದ ಪಾರಂಪರಿಕ ತಾಣಗಳು ಮತ್ತು ಯುನೆಸ್ಕೋ ಪಟ್ಟಿಮಾಡಿದ ವಾರಂಗಲ್‌ನಲ್ಲಿರುವ ರಾಮಪ್ಪ ದೇವಸ್ಥಾನ ಸೇರಿವೆ.

**<><*<><>*><>**

ಹೈದರಾಬಾದ್‌ನಲ್ಲಿ ಇಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ, ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿಯಾಗಲಿವೆ. ಪಂದ್ಯ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ. ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ನಿನ್ನೆ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ, ಲಖನೌ ಸೂಪರ್ ಜೈಂಟ್ಸ್ ತಂಡದ ವಿರುದ್ಧ ೩೭ ರನ್ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ, ಪಂಜಾಬ್ ಕಿಂಗ್ಸ್ ತಂಡ ಅಂಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿದೆ.

**<><*<><>*><>**

ಬ್ಯಾಂಕಾಕ್‌ನಲ್ಲಿ ನಿನ್ನೆ ನಡೆದ ಡಬ್ಲ್ಯೂಟಿಟಿ ಯೂತ್ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಪಂದ್ಯಾವಳಿಯ, ೧೯ ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದಲ್ಲಿ, ಭಾರತದ ಅಂಕುರ್ ಭಟ್ಟಾಚಾರ್ಜಿ ಮತ್ತು ಅಭಿನಂದ್ ಪ್ರಧಾವಾಧಿ, ಕೊರಿಯಾದ ಲೀ ಜಂಗ್‌ಮೋಕ್ ಮತ್ತು ಚೋಯ್ ಜಿವೂಕ್ ಅವರನ್ನು ೩-೧ ಅಂತರದಿಂದ ಸೋಲಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಸಿಂಗಲ್ಸ್‌ನಲ್ಲಿ, ಅಂಕುರ್, ಕೊರಿಯಾದ ಲೀ ಸೆಯುಂಗ್ಸೂ ವಿರುದ್ಧ ೩-೦ ಅಂತರದಿಂದ ಜಯಗಳಿಸುವ ಮೂಲಕ ಉತ್ತಮ ಆರಂಭ ಪಡೆದರು ಆದರೆ ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್‌ನ ಯೋಶಿಯಾಮಾ ವಿರುದ್ಧ ೦-೩ ಅಂತರದಿಂದ ಪರಾಭವಗೊಂಡರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>**